ಶ್ರೀ ರಾಜ ಅಮರೇಶ್ವರ ನಾಯಕ್ (ಬಂದಿಖಾನೆ ಸಚಿವರು):

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಬೆಂಗಳೂರು ಕುಮಾರಪಾರ್ಕ್ ವಾಟರ್ ಟ್ಯಾಂಕ್ ಹತ್ತಿರದ ಗುಡಿಸಲು ವಾಸಿಗಳಿಗೆ ಬಿ.ಡಿ.ಎ. ವತಿಯಿಂದ ನಿವೇಶನಗಳನ್ನು ಬದಗಿಸಿಕೊಡುವ ಬಗ್ಗೆ

4399 (5117) : ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಕುಮಾರ ಪಾರ್ಕ್ ವಾಟರ್ ಟ್ಯಾಂಕ್ ಹತ್ತಿರ ಗುಡಿಸಲುಗಳನ್ನು ಹಾಕಿಕೊಂಡು ಜೀವನ ನಡೆಸುತ್ತಿದ್ದ 169 ಬಡ ಕುಟುಂಬ ವರ್ಗಕ್ಕೆ ಬೆಂಗಳುರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೇರೆ ಉತ್ತಮ ಕಡೆಯಲ್ಲಿ ನಿವೇಶನವನ್ನು ಒದಗಿಸಿಕೊಡುವುದಾಗಿ ಸರ್ಕಾರವು ಭರವಸೆಯನ್ನು ನೀಡಿ ಇವರನ್ನು ತೆರವುಗೊಳಿಸಿರುವುದು ನಿಜವಲ್ಲವೇ.

ಆ) ಈ ಕುಟುಂಬಗಳಿಗೆ ಈಗಾಗಲೇ ಎಲ್ಲೆಲ್ಲಿ ನಿವೇಶನಗಳನ್ನು ಬೆಂ:ಅ: ಪ್ರಾಧಿಕಾರದ ವತಿಯಿಂದ ಒದಗಿಸಿ ಸೂರಿನ ವ್ಯವಸ್ಥೆಯನ್ನು ಕಲ್ಪಿಸಿ ಕೊಡಲಾಗಿದೆ; ಇನ್ನೂ ನಿವೇಶನ ಹಂಚಿಕೆಯಾಗದೇ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಇವರುಗಳಿಗೆ ಯಾವ ಯಾವ ಬಡಾವಣೆಗಳಲ್ಲಿ ನಿವೇಶನವನ್ನು ಹಂಚಿಕೆ ಮಾಡಿಕೊಡಲಾಗುವುದು;

ಇ) ಈ ಬಡ ನಿರ್ಗತಿಕ ಕುಟುಂಬಗಳಿಗೆ ನಿವೇಶನ ಹಂಚಿಕೆ ಯಾಗದೇ ಜಾತಕಪಕ್ಷಿಯಂತೆ ನಿವೇಶನಕ್ಕಾಗಿ ಸರ್ಕಾರವು ಕೊಟ್ಟಂತಹ ಮಾತಿಗೆ ಕಾಯುತ್ತಿರುವ ಫಲಾನುಭವಿಗಳಿಗೆ ಇದೇ ಸಾಲಿನಲ್ಲಿ ಖಾಲಿ ಇರುವಂತಹ ಬೆಂಗಳೂರಿನ ಬಿ.ಟಿ.ಎಂ. ಲೇಔಟ್ 2ನೇ ಹಂತ, ಗುಂಡೂರಾವ್ ಬಡಾವಣೆಗಳಲ್ಲಿ ನಿವೇಶನ ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗಿದೆಯೇ;

ಈ) ಹಾಗಿದ್ದರೆ ಶೀಘ್ರದಲ್ಲಿ ಹಲವಾರು ವರ್ಷಗಳಿಂದ ನಿವೇಶನಕ್ಕಾಗಿ ಕಾಯುತ್ತಿರುವ ಬಡ ನಿರ್ಗತಿಕ ಕುಟುಂಬ ವರ್ಗಕ್ಕೆ ನಿವೇಶನವನ್ನು ಕಲ್ಪಿಸಿಕೊಟ್ಟು ಇವರ ವಾಸಕ್ಕೆ ಅನುಕೂಲ ಮಾಡಿಕೊಡುವುದು ಯಾವಾಗ;

ಉ) ಹಲವಾರು ವರ್ಷಗಳಿಂದ ಇವರುಗಳಿಗೆ ನಿವೇಶನ ಹಂಚಿಕೆ ಮಾಡದೇ ವಿಳಂಬ ಮಾಡಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಮುಂದೆ ಇಂತಹ ನಿರ್ಗತಿಕ ಕುಟುಂಬದವರಿಗೆ ಅನಾಹುತಗಳು ಜರುಗದಂತೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಕುಮಾರ ಪಾರ್ಕ್ ಬಡಾವಣೆಯು ಬಹಳ ಹಳೆಯ ಬಡಾವಣೆ ಹಾಗೂ ಅಭಿವೃದ್ಧಿ ಹೊಂದಿದ ಬಡಾವಣೆಯಾಗಿದ್ದು, 169 ಕೊಳಚೆ ನಿವಾಸಿಗಳು ಕುಮಾರ ಪಾರ್ಕ್‌ನ ಹತ್ತಿರದ ವಾಟರ್ ಟ್ಯಾಂಕ್ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂಬ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ದಾಖಲೆ ಲಭ್ಯವಿರುವುದಿಲ್ಲ.

ಆ) ಇ) ಈ) ಉ)

ಮೇಲಿನ ಉಪ ಪ್ರಶ್ನೆ (ಅ)ಗೆ ನೀಡಲಾದ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಔರಾದ್ ತಾಳ್ಲೂಕಿನ ಖೇರ್ಡಾ (ಬಿ) ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್ ಸ್ಥಾಪಿಸುವ ಬಗ್ಗೆ

4400 (5280) : ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಖೇರ್ಡಾ (ಬಿ) ಗ್ರಾಮಕ್ಕೆ 33 ಕೆ.ವಿ. ಸ್ಟೇಷನ್ ಮಂಜೂರಾಗಿದೆಯೇ?

ಆ) ಸದರಿ ಕಾಮಗಾರಿ ಈ ವರ್ಷ ಕೈಗೊಳ್ಳಲಾಗುವುದೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಇಲ್ಲ. ಹಣಕಾಸಿನ ಹೊಂದಾಣಿಕೆಯನ್ನು ಮಾಡಿಕೊಂಡು, ಮುಂಬರುವ ವರ್ಷವಾದ 2004–05 ರಲ್ಲಿ ಸದರೀ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದೆ.

ಔರಾದ್ ನಗರದಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ

4401 (5281) : ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ನಗರದ 30,000 ಜನರಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಬಗ್ಗೆ ಸರ್ಕಾರ ಗಮನಹರಿಸಿ, ತ್ವರಿತವಾಗಿ ಏನಾದರೂ ಯೋಜನೆ ಕೈಗೊಳ್ಳುವುದೇ?

ಶ್ರೀ ಕುಮಾರ್ ಎಸ್. ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಔರಾದ್ ಪಟ್ಟಣ ಪಂಚಾಯತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ರೂ. 258.15 ಲಕ್ಷಗಳಲ್ಲಿ ಯೋಜನೆಯನ್ನು ರೂಪಿಸಿದ್ದು, ಈ ಯೋಜನೆಗೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಸಣ್ಣ ನೀರಾವರಿ ಇಲಾಖೆಯಲ್ಲಿ ಅನೇಕ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಖರೀದಿ ಮಾಡಿರುವ ಬಗ್ಗೆ

4402 (5071) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯ ಗುಲ್ಬರ್ಗಾ ವಿಭಾಗದಲ್ಲಿ ಎಂ.ಎಸ್. ಗೇಟುಗಳು, ಆಯಿಲ್ ಇತ್ಯಾದಿ ವಸ್ತುಗಳನ್ನು ಸರಕು ಖರೀದಿ ಇಲಾಖೆಯ ಮೂಲಕ ಕೊಳ್ಳದೆ ಹೆಚ್ಚಿನ ಬೆಲೆಗೆ ನೇರವಾಗಿ ಖರೀದಿ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರೀತಿ ಖರೀದಿ ಮಾಡಿದ ಕಾರಣ ಸರ್ಕಾರಕ್ಕೆ ಉಂಟಾದ ನಷ್ಟ ಎಷ್ಟು ಹಾಗೂ ಇದನ್ನು ಹೇಗೆ ವಸೂಲಿ ಮಾಡಲಾಗಿದೆ;